# ಕಮ್ಲೂಗೆ ಮಾವು ತಂದ ಪೇಚು



ಪ್ರತಿವರ್ಷ ಕಮ್ಲೂ ಪಾಲಿಗೆ ಇದೇ ಕಥೆ. ತೋಟದಿಂದ ಮಾವಿನ ಹಣ್ಣು ಬರೋದು ತಪ್ಪಲ್ಲ, ಮನೇಲಿ ಎಲ್ಲರನ್ನೂ 'ಕ್ಯಾಚ್' ಹಾಕ್ಕೊಂಡು ಹಣ್ಣು ಹೆಚ್ಚಿ ಬಲವಂತದಿಂದ ತಿನ್ನಿಸೋ ಸಾಹಸ ತಪ್ಪಲಿಲ್ಲ.

■ ವೈ.ಕೆ. ಸಂಧ್ಯಾ ಶರ್ಮ
ಕಲೆ: ಸಂತೋಷ್ ಸಸಿಹಿತ್ಲು

ಎಲ್ಲರೂ ಮಾವಿನ ಹಣ್ಣೆಂದರೆ, ಅದರಲ್ಲೂ ಬಾದಾಮಿ ಮಾವು ಎಂದರೆ ಬಾಯಿ ಬಾಯಿ ಬಿಡುವಾಗ ಕಮ್ಲೂಗೆ ಮಾತ್ರ ಮಾವು ಅಂದ್ರೆ ಸಿಂಹಸ್ವಪ್ನ! ಎದುರಿಗೆ ಮಂಕರಿಗಟ್ಟಲೆ ಮಾವಿನ ಹಣ್ಣು ಇಟ್ಟುಕೊಂಡು ಹ್ಯಾಪುಮೋರೆ ಹಾಕಿಕೊಂಡು ಚಿಂತಾಕ್ರಾಂತಳಾಗಿ ಕೂತಿರಬೇಕೇ ಕಮ್ಲೂ...

ತೋಟದಿಂದ ಮಾವಿನ ಹಣ್ಣಿನ ಬುಟ್ಟಿಗಳನ್ನು ತಂದು ಅವಳ ಎದುರಿಗೆ ಸಾಲಾಗಿ ಜೋಡಿಸಿಟ್ಟ ಕಿರಿಮಗ 'ನನ್ನ ಕೆಲಸ ಮುಗೀತು, ಇನ್ನು ವಿಲೇವಾರಿ ನಿನ್ನ ಕೆಲಸ ಕಣಮ್ಮ' ಎಂದವನೇ ಅಲ್ಲಿಂದ ಕಾಲ್ಕಿತ್ತಿದ್ದ.

ಕಮ್ಲೂ ಮುಖ ಇಂಗು ತಿಂದ ಮಂಗನಂತಾಗಿತ್ತು. ಇದು ಪ್ರತಿ ವರ್ಷದ ತಲೆನೋವು. 'ಯಾರಿಗಾದರೂ ಅಲ್ಲೇ ಗುತ್ತಿಗೆ ಕೊಡಕ್ಕೆ ಆಗ್ತಿರ್ಲಿಲ್ವೇನೋ, ನನ್ನ ಪ್ರಾಣ ಯಾಕೆ ತಿನ್ತೀರೋ, ಮನೆಗೆಲಸವೇ ಹೊರೆಯಿದೆ, ಇದ್ ಬೇರೆ ಗಂಟ್ ಹಾಕ್ತೀರಾ... ಗಂಡಸ್ರು ನೀವು ಈ ಕೆಲಸವೆಲ್ಲ ಮಾಡ್ಬೇಕು' ಎಂದು ಪೇಪರ್ ಓದುತ್ತ ಕುಳಿತಿದ್ದ ಗಂಡ ಶ್ರೀಕಂಠೂನ ನೋಟದಿಂದಲೇ ತಿವಿದಳು.

'ನೀನು ಎಫಿಷಿಯೆಂಟು ಕಣೆ... ಯಾರಿಗೆ ಬೇಕಾದ್ರೂ ಮಾರು, ಕೊಡು, ಹಂಚು. ನೋ ಆಬ್ಜೆಕ್ಷನ್... ಒಟ್ನಲ್ಲಿ ಇದು ಖರ್ಚಾಗ್ಬೇಕು ಅಷ್ಟೇ' ಗಂಡನ ಬೇಜವಾಬ್ದಾರಿ ಮಾತು ಕೇಳಿ ಅವಳಿಗೆ ರೇಗಿಹೋಯ್ತು.